ಪರಿಶೀಲನೆಯನ್ನು ಮಾಡಲು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ಸರ್ಕಾರಿ ಆದೇಶ ಸಂ: ಮೂಅಎ 26 ರಾರಾಹೆ 2011, ದಿನಾಂಕ 31.05.2011ರಂದು ರಚಿಸಲಾಗಿದೆ. ಸಮಿತಿಯು ಕನಿಷ್ಠ 3 ತಿಂಗಳಿಗೊಮ್ಮೆ ಸಭೆ ಏರ್ಪಡಿಸಿ ಭೂಸ್ವಾಧೀನ ಹಾಗೂ ರೈಲು ಮಾರ್ಗದ ಪ್ರಗತಿಯ ಕುರಿತು ಪರಿಶೀಲಿಸಲಾಗುತ್ತಿದೆ. ಈ ಮಾರ್ಗಕ್ಕೆ ಅಗತ್ಯವಾದ (ಕುಣಿಗಲ್ ಸ್ಪಡ್ ಫಾರ್ಮ್ ಮಾರ್ಗ ಬದಲಾವಣೆಯಿಂದ ಭೂಸ್ವಾಧೀನ ಹೊರತುಪಡಿಸಿ) ಎಲ್ಲಾ ಜಮೀನನ್ನು ಸ್ವಾಧೀನಪಡಿಸಿಕೊಂಡು ನೈರುತ್ಯ ರೈಲ್ವೆಗೆ ಹಸ್ತಾಂತರಿಸಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿದೆ. ಈ ಮಾರ್ಗವನ್ನು 2014ನೇ ಸಾಲಿನ ಅವಧಿಯೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 27

ಸದಸ್ಯರ ಹೆಸರು : ಶ್ರೀ ಮಹದೇವ ಪ್ರಸಾದ ಹೆಚ್.ಎಸ್. (ಗುಂಡ್ಲಪೇಟೆ)
ಶ್ರೀ ಸಿ. ಪುಟ್ಟರಂಗ ಶೆಟ್ಟಿ (ಚಾಮರಾಜನಗರ)

ಉತ್ತರಿಸಬೇಕಾದ ದಿನಾಂಕ : 31.01.2012

ಉತ್ತರಿಸುವ ಸಚಿವರು : ಮುಖ್ಯಮಂತ್ರಿ

ಪ್ರಶ್ನೆಗಳು:

ಅ) ಚಾಮರಾಜನಗರ ಜಿಲ್ಲಾ ಆಸ್ಪತ್ರೆ ಕಟ್ಟಡ ನಿರ್ಮಾಣ ಪೂರ್ಣಗೊಂಡಿದೆಯೇ? ಪೂರ್ಣಗೊಂಡಿದ್ದರೆ ಯಾವಾಗ ಉದ್ಘಾಟಿಸಲಾಗುವುದು;

ಆ) ಈ ಜಿಲ್ಲೆ ಆಸ್ಪತ್ರೆಗೆ ಯಾವ ಯಾವ ಯಂತ್ರೋಪಕರಣಗಳನ್ನು ಒದಗಿಸಲಾಗಿದೆ. ಇನ್ನೂ ಯಾವ ಯಂತ್ರೋಪಕರಣ ಒದಗಿಸಬೇಕಾಗಿದೆ.

ಇ) ಈ ಜಿಲ್ಲಾ ಆಸ್ಪತ್ರೆಗೆ ಮಂಜೂರು ಮಾಡಿರುವ ಹುದ್ದೆಗಳು ಎಷ್ಟು, ಎಷ್ಟು ಹುದ್ದೆಗಳಿಗೆ ಆಗತ್ಯ ವೈದ್ಯರು ಹಾಗೂ ಇತರೆ ಸಿಬ್ಬಂದಿ ನೇಮಿಸಲಾಗಿದೆ?

ಉತ್ತರಗಳು:

ಅ) ಪ್ರಸ್ತುತ ಚಾಮರಾಜನಗರ ಜಿಲ್ಲೆ ಆಸ್ಪತ್ರೆಯು 150 ಹಾಸಿಗೆಗಳ ಕಟ್ಟಡವನ್ನು ಹೊಂದಿದ್ದು, ಸಾರ್ವಜನಿಕರಿಗೆ ಆರೋಗ್ಯ ಸೇವೆಯನ್ನು ನೀಡುತ್ತಿದೆ. ಹೆಚ್ಚುವರಿ 100 ಹಾಸಿಗೆಗಳ ಕಟ್ಟಡ ನಿರ್ಮಾಣವು ಪೂರ್ಣಗೊಂಡಿದ್ದು, ದಿನಾಂಕ 21.11.2011 ರಂದು ಇಲಾಖೆಗೆ ಹಸ್ತಾಂತರಗೊಂಡಿದೆ. ಸಧ್ಯದಲ್ಲಿಯೇ ನೂತನ ಕಟ್ಟಡದಲ್ಲಿ ಸೇವೆ ಪ್ರಾರಂಭಿಸಲಾಗುವುದು.

ಆ) ಸದರಿ ಆಸ್ಪತ್ರೆಯ 150 ಹಾಸಿಗೆಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಅವಶ್ಯವಿರುವ ಉಪಕರಣಗಳನ್ನು ಒದಗಿಸಲಾಗಿದೆ. ಹೆಚ್ಚುವರಿ 100 ಹಾಸಿಗೆಗಳಿಗೆ ಅನುಗುಣವಾಗಿ ಕ್ಷ–ಕಿರಣ ಯಂತ್ರ, ಶಸ್ತ್ರ ಚಿಕಿತ್ಸಾ ಉಪಕರಣಗಳು, ಹೆರಿಗೆ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳು ಮತ್ತು ಆಧುನಿಕ ಪ್ರಯೋಗ ಶಾಲಾ ಉಪಕರಣಗಳು ಇತ್ಯಾದಿಗಳನ್ನು ಒದಗಿಸುವ ಸಲುವಾಗಿ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

ಇ) ಚಾಮರಾಜನಗರ ಜಿಲ್ಲಾ ಆಸ್ಪತ್ರೆಗೆ 15 ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, 13 ತಜ್ಞರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ ನೆಫ್ರೋಯುರಾಲಜಿ ಮತ್ತು ಪ್ಲಾಸ್ಟಿಕ್ ಸರ್ಜರಿ ವಿಭಾಗಗಳಲ್ಲಿ ಒಂದೊಂದು ತಜ್ಞರ ಹುದ್ದೆ ಖಾಲಿ ಇದೆ. 2 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, ಒಂದು ಹುದ್ದೆ ಭರ್ತಿಯಾಗಿದೆ. ಅಲ್ಲದೆ, 2 ದಂತ ಆರೋಗ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, ಎರಡೂ ಹುದ್ದೆಗಳು ಭರ್ತಿಯಾಗಿವೆ. ಮುಂದುವರೆದು, ಈ ಆಸ್ಪತ್ರೆಗೆ ಒಟ್ಟು 92 ಇತರೆ ಸಿಬ್ಬಂದಿ ಹುದ್ದೆಗಳು ಮಂಜೂರಾಗಿದ್ದು, 60 ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ 32 ಹುದ್ದೆಗಳು ಖಾಲಿ ಇವೆ.